# ವಾರ್ಡ್ ಸಮಿತಿಯ ನಡವಳಿಗಳು

******

**ದಿನಾಂಕ: 05/12/2020**

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಹಾಗೂ ಅಧಿಕಾರಿಗಳು

ಶ್ರೀ. ರಾಮು.ಜಿ, ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು,

ಶ್ರೀ. ವಿನಯ್. ಕೆ, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.53, ಬಸವನಪುರ ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿಗಳು,

ಶ್ರೀ.ರಘು.ವಿ, ಸ.ಕಾ.ಅ, ಮಳೆನೀರು ಕಾಲುವೆ ಉವಿ, ಕೆ.ಆರ್.ಪುರ.

ಶ್ರೀ. ರಾಘವೇಂದ್ರ. ಜೆ.ಎನ್, ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.53, ಬಸವನಪುರ,

ಶ್ರೀ. ಸುರೇಶ್. ಎಸ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.53, ಬಸವನಪುರ,

ಶ್ರೀ. ಓಬಲೇಶ್.ವಿ, ತೆರಿಗೆ ನಿರೀಕ್ಷಕರು, ವಾರ್ಡ್ ಸಂಖ್ಯೆ.53, ಬಸವನಪುರ,

ಶ್ರೀಮತಿ. ಪ್ರತಿಭ, ತೆರಿಗೆ ನಿರೀಕ್ಷಕರು, ವಾರ್ಡ್ ಸಂಖ್ಯೆ.53, ಬಸವನಪುರ

ಶ್ರೀ. ವಿನಯ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ,

ಮತ್ತು ವಾರ್ಡ್‌ನ ಸಾರ್ವಜನಿಕರು.

ದಿನಾಂಕ **05/12/2020** ರಂದು ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ, ಬಿ.ಬಿ.ಎಂ.ಪಿ ಮಹದೇವಪುರ ವಲಯದ ವಾರ್ಡ್ ಸಂಖ್ಯೆ.53, ಬಸವನಪುರ ವಾರ್ಡ್ ಸಮಿತಿಯ ಸಭೆಯನ್ನು ಮಾನ್ಯ ಅಧ್ಯಕ್ಷರು ವಾರ್ಡ್ ಸಮಿತಿ ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ. ರಾಮು.ಜಿ, ಮತ್ತು ವಾರ್ಡ್ ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರಾದ ಶ್ರೀ. ವಿನಯ್.ಕೆ ರವರ ಸಮ್ಮುಖದಲ್ಲಿ ನಡೆಸಲಾಯಿತು.

ವಾರ್ಡ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ವಿನಯ್.ಕೆ ರವರು ಸಭೆಗೆ ಹಾಜರಾದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ರಾಮು.ಜಿ, ರವರಿಗೆ ಹಾಗೂ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸದರಿ ಸಭೆಯಲ್ಲಿ ಮೊಟ್ಟಮೊದಲಿಗೆ ಎಲ್ಲಾ ಸದಸ್ಯರ ಪರಸ್ಪರ ಪರಿಚಯ ಮಾಡಿಕೊಂಡು, ವಾರ್ಡ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗದ ನಿಯಂತ್ರಣದ ಬಗ್ಗೆ ಸವಿವರವಾಗಿ ಚರ್ಚಿಸಲು ಸಾರ್ವಜನಿಕರಿಗೆ ತಿಳಿಸಲಾಯಿತು.

- ವಾರ್ಡ್ ವ್ಯಾಪ್ತಿಯಲ್ಲಿ ಅನಧೀಕೃತವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಗೆದಿರುವ ರಸ್ತೆಯನ್ನು ಸರಿಪಡಿಸುವ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರರಿಗೆ ತಿಳಿಸಲಾಯಿತು.
- ಸಮೃದ್ಧಿ ಬಡಾವಣೆಯ ನಿವಾಸಿಗಳು ನೀರು ಸರಬರಾಜಿನ ಬಗ್ಗೆ ದೂರಿದಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು.
- ಸಮೃದ್ಧಿ ಬಡಾವಣೆಯ ನಿವಾಸಿಗಳು ಕಸದ ಸಮಸ್ಯೆಯ ಬಗ್ಗೆ ತಿಳಿಸಿದಾಗ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು.
- ವಾರ್ಡ್‌ನಲ್ಲಿ ಮಾರ್ಷಲ್‌ಗಳ ಸಂಖ್ಯೆ ಕಡಿಮೆ ಇರುವುದರಿಂದ ಕಸದ ಸಮಸ್ಯೆ ಹೆಚ್ಚಾಗಿರುವ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು, ಮಾರ್ಷಲ್‌ಗಳ ಸಂಖ್ಯೆ ಹೆಚ್ಚಿಸಲು ಶ್ರೀ. ಬಸವರಾಜ್ ರವರಿಗೆ ತಿಳಿಸಲಾಯಿತು.

Scanned with CamScanner

- ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
- ಸೀ ಕಾಲೇಜ್ ಹಿಂಭಾಗದ ರಸ್ತೆಯಲ್ಲಿ ಒಳಚರಂಡಿ ಸಮಸ್ಯೆಯನ್ನು ಸರಿಪಡಿಸಲು ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು.
- ದೇವಸಂದ್ರ ಕೆರೆ ಪಕ್ಕದ ರಸ್ತೆಯಲ್ಲಿ ಒಳಚರಂಡಿ ಸಮಸ್ಯೆಯನ್ನು ಮತ್ತು ಕತ್ತರಿಸಿರುವ ರಸ್ತೆಯನ್ನು ದುರಸ್ತಿಪಡಿಸಲು ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು.
- ವಾರ್ಡ್‌ನಲ್ಲಿ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಯಾವುದೇ ರಸ್ತೆಯನ್ನು ಕತ್ತರಿಸುವ ಮೊದಲು ಪಾಲಿಕೆಯಿಂದ ಅನುಮತಿಯನ್ನು ಪಡೆಯುವಂತೆ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರರಿಗೆ ತಿಳಿಸಲಾಯಿತು.
- ಗಾಯತ್ರಿ ಬಡಾವಣೆ ಹಾಗೂ ಆರ್.ಟಿ.ಓ ಕಛೇರಿ ಹಿಂಭಾಗದ ಬಡಾವಣೆಗಳಲ್ಲಿ ಹಾದು ಹೋಗುವ ಮಳೆ ನೀರು ಕಾಲುವೆಯ ಹೂಳನ್ನು ತೆಗೆಯಲು ಶ್ರೀ.ರಘು.ವಿ, ಸ.ಕಾ.ಅ, ಮಳೆನೀರು ಕಾಲುವೆ ಉವಿ, ಕೆ.ಆರ್.ಪುರ ರವರಿಗೆ ತಿಳಿಸಲಾಯಿತು.
- ಪಾಲಿಕೆಯ ವತಿಯಿಂದ ಕೊರೆಯಿಸಿರುವ ಕೊಳವೆ ಬಾವಿಗಳನ್ನು ನಿರ್ವಹಿಸಲು ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಗೆ ಹಸ್ತಾಂತರಿಸಲು ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.
- ಕಸ ವಿಲೇವಾರಿಯ ಬಗ್ಗೆ ಚರ್ಚಿಸಲಾಗಿ, ವಾರ್ಡ್‌ನಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಬಗ್ಗೆ ಚರ್ಚಿಸಲಾಗಿ ಕಸ ವಿಂಗಡಣೆ ಮತ್ತು ವಿಲೇವಾರಿ ಕಾರ್ಯವು ಸಮರ್ಪಕವಾಗಿ ನಡೆಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಅಂದಿನ ಕಸವನ್ನು ಅಂದೇ ವಿಲೇವಾರಿ ಮಾಡಬೇಕೆಂದು ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಆಗಿಂದಾಗ್ಗೆ ಸೊಳ್ಳೆ ನಿಯಂತ್ರಿಸಲು ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ವರೆಗೆ ತಾತ್ಕಾಲಿಕವಾಗಿ ವಾರ್ಡ್ ಇಂಜಿನಿಯರ್‌ರವರಿಗೆ ರಸ್ತೆಗಳಲ್ಲಿನ ಗುಂಡಿಗಳ ಬಗ್ಗೆ ಗಮನ ಹರಿಸಿ ತುರ್ತಾಗಿ ಕ್ರಮವಹಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿಗಾವಹಿಸಲು ತಿಳಿಸಲಾಯಿತು.

ಸದಸ್ಯರು ಆಗಿಂದಾಗೆ ಕಾಮಗಾರಿಗಳನ್ನು ಪರಿವೀಕ್ಷಿಸಿ ಉತ್ತಮ ಸಲಹೆಗಳನ್ನು ಹಾಗೂ ಅತ್ಯವಶ್ಯಕವಾಗಿರುವ ಕಾಮಗಾರಿಗಳನ್ನು ಗುರುತಿಸಿ ಮುಂದಿನ ಸಭೆಯಲ್ಲಿ ತಿಳಿಸಲು ಕೋರಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಮಾನ್ಯ ಅಧ್ಯಕ್ಷರು ವಾರ್ಡ್ ಸಮಿತಿ
ಮತ್ತು ನೋಡಲ್ ಅಧಿಕಾರಿ

ವಾರ್ಡ್ ಸಮಿತಿ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು

Scanned with CamScanner